

# ನಟನಿಗೆ ಕಲ್ಪನೆ ಊರುಗೋಲು

**ಪ್ರಭುರಾಜ್**
**ಕಲರ್ಸ್ ಸೂಪರ್‌ನ 'ಸಿಲ್ಲಿಲಲ್ಲಿಯ ಡಾ. ವಿಠಲ್‌ರಾವ್**

◆ **ರಂಗಭೂಮಿ ನಿಮಗೆ ಏನನ್ನು ಕಲಿಸಿದೆ?**

ರಂಗಭೂಮಿ ವ್ಯಕ್ತಿತ್ವವನ್ನು ರೂಪಿಸುತ್ತದೆ. ನಟನೆಯನ್ನು ನಾನು ಕಲಿತಿದ್ದು ಮೈಸೂರಿನ 'ನಟನ' ರಂಗಶಾಲೆಯಲ್ಲಿ. ವರ್ತನೆ– ನಡವಳಿಕೆಗಳನ್ನು ನಾನು ಅಲ್ಲಿ ಕಲಿತಿದ್ದೇನೆ. ನಟನ ತಂಡದ ಅನೇಕ ನಾಟಕಗಳಲ್ಲಿ ನಟಿಸುವ ಅವಕಾಶ ತುಂಬ ಅನುಭವ ನೀಡಿದೆ. 'ಮ್ಯಾಕ್‌ಬೆತ್' ಆಗಿ ನಟಿಸಿದ ನಾನು 'ಚೋರ ಚರಣದಾಸ' ನಾಟಕದಲ್ಲಿ ಸೈನಿಕನ ಪಾತ್ರ ಮಾಡಿದ್ದೇನೆ. ರಂಗಭೂಮಿಯ ಸುತ್ತಾಟ ಪಾತ್ರಗಳ ಏರಿಳಿತವನ್ನು ಕಲಿಸಿದೆ. 'ಪಾಪ ಪಾಂಡು'ನಲ್ಲಿ ಬೆಗ್ಗರ್ ಕುಮಾರ ಎನ್ನುವ ಚಿಕ್ಕ ಪಾತ್ರ ನಿರ್ವಹಿಸುತ್ತಿದ್ದೆ.

ಅದೇ ಪ್ರೊಡಕ್ಷನ್ನಿನ 'ಸಿಲ್ಲಿ ಲಲ್ಲಿ'ಯಲ್ಲಿ ಕರೆದು ಆಡಿಷನ್ ಮಾಡಿಸಿದರು. ಅದು ಒಂದು ಸ್ವಾರಸ್ಯಕರ ಸಂಗತಿ. ನನಗೆ ಆಹ್ವಾನ ನೀಡಿದ್ದು ಕಾಂಪೌಂಡರ್ ಗೋವಿಂದು ಪಾತ್ರಕ್ಕೆ. ಆ ಪಾತ್ರಕ್ಕೆ ತಯಾರಿಯಾಗಿ ನನ್ನ ದೇಹ ಭಾಷೆಯ ವ್ಯಾಕರಣಕ್ಕೆ ಗೋವಿಂದನ ಸಮಾಸ ಮಾಡಿದ್ದೆ. ಸ್ಕ್ರಿಪ್ಟ್‌ನಲ್ಲಿ ಡಾ. ವಿಠಲ್‌ರಾವ್ ಪಾತ್ರ ಇದೆ. ಗೋವಿಂದ್‌ಗೆ ರೆಡಿಯಾಗಿದ್ದ ನಾನು ವಿಠಲ್‌ರಾವ್ ಆಗುವುದೆಂದರೆ, ಆ ಕ್ಷಣ ಸಿಕ್ಕಾಪಟ್ಟೆ ಖುಷಿ ಕೊಡ್ತು. ಇದೆಲ್ಲ ರಂಗಭೂಮಿಯ ಉಡುಗೊರೆ.

◆ **ದುರಂತ ನಾಯಕನಾಗಬಲ್ಲ ನಟ, ನಗೆಗಡಲಲ್ಲಿ ವೀಕ್ಷಕನನ್ನು ತೇಲಿಸಲೂ ಸಾಧ್ಯ ಹಾಗಾದರೆ ಅವನ ಕಸರತ್ತು ಹೇಗಿರಬೇಕು?**

ವೈಯಕ್ತಿಕವಾಗಿ ಕೇಳಿದರೆ, ಒಂದೇ ದಿನಕ್ಕೆ ಮ್ಯಾಕ್‌ಬೆತ್ ಆಗಲು ಆಗುವುದಿಲ್ಲ. ಅದರ ಹಿಂದೆ ಒಂದೂವರೆ ತಿಂಗಳ ತರಬೇತಿ ಇತ್ತು. ಚಂದ್ರಶೇಖರ ಕಂಬಾರ್ 'ಮ್ಯಾಕ್‌ಬೆತ್'ನ್ನು 'ಮಾರಿಕಾಡು' ಎಂದು ರೂಪಾಂತರ ಮಾಡಿದ್ದಾರೆ. ಅದರಲ್ಲಿ ನಾನು ನಾಯಕನಾಗಲು ನಿರ್ದೇಶಕ ಮೇಘಸಮೀರ ಕಾರಣ. ಇಲ್ಲಿ ವಿಠಲ್ ರಾವ್ ಕಾಮಿಡಿ ಪಾತ್ರ ಮಾಡುತ್ತೇನೆ ಅಂದರೆ ಅದಕ್ಕೆ ಸಿಹಿಕಹಿ ಚಂದ್ರು ಕಾರಣರಾಗುತ್ತಾರೆ. ಎಂತಹದ್ದೇ ಪಾತ್ರವನ್ನು ನಾನು ಮಾಡಬಲ್ಲೆ ಎನ್ನುವ ಆತ್ಮ ವಿಶ್ವಾಸವನ್ನು ಹುಟ್ಟಿಸಿ ನನ್ನಲ್ಲಿ ಆ ಸಾಮರ್ಥ್ಯ ಇದೆ ಎನ್ನುವುದನ್ನು ಗುರುತಿಸಿದವರು ಮಂಡ್ಯರಮೇಶ್. ದೇಸಾಯಿ ಅವರ 'ಈ ಕೆಳಗಿನವರು' ಎಂಬ ರಂಗಕೃತಿಯಲ್ಲಿ 22 ವರ್ಷದ ನಾನು 92 ವರ್ಷದ ಮುದುಕನ ಮಾತ್ರ ಮಾಡಬೇಕಿತ್ತು. ನಟನೊಬ್ಬ ಯಾವುದನ್ನಾದರೂ... ಏನನ್ನಾದರೂ ಆಗಬಲ್ಲ ಎನ್ನುವುದಾದರೆ ಆ ರೀತಿಯ ಪಾತ್ರ ಅದಕ್ಕೆ ಬೇಕಾಗುವ ತರಬೇತಿ ಬೇಕು ಎಂದೆನಿಸುತ್ತದೆ.

ಲಕ್ಕಪ್ಪ ಕೊಳೆಚೆಪ್ರದೇಶದ ನಿವಾಸಿ. ಅದಕ್ಕಾಗಿ ಸ್ಲಂಗೆ ಭೇಟಿ ನೀಡಬೇಕಿತ್ತು. ನಾಟಕ ಆಡುವ ಮುನ್ನ ನಾಲ್ಕೈದು ದಿನ ಸ್ನಾನ ಮಾಡುವಂತಿರಲಿಲ್ಲ. ಒಂದು ಪಾತ್ರವನ್ನು ಒಬ್ಬ ನಟ ಅನುಭವಿಸುವುದು ಅಲ್ಲಿ. ರಂಗಭೂಮಿಯಲ್ಲಿ ಮತ್ತೊಂದು ಟೇಕ್ ಇರುವುದಿಲ್ಲ. ರಂಗರಸಿಕರ ಮುಂದೆ ನಾವು ನೇರವಾಗಿ ಆಡುತ್ತೇವೆ. ಹಾಗೆಯೇ ವಿಠಲ್ ರಾವ್ ಪಾತ್ರಕ್ಕೆ ಬಂದರೆ ಅವನು ಏನು? ಆತ ಹೆಂಗಸರೆಂದರೆ ಜೊಲ್ಲು ಸುರಿಸುವ ಪಾರ್ಟಿ, ಪುಕ್ಕಲ, ತಾನೇ ಬುದ್ಧಿವಂತ ಎನ್ನುವ ಭ್ರಮೆ ಇರುವವನು. ಅದನ್ನು ರಂಗಭೂಮಿ ಹಿನ್ನೆಲೆಯಲ್ಲಿ ನೋಡಿದೆ. ಹಿಂದೆ ರವಿಶಂಕರ್ ವಿಠಲ್ ರಾವ್ ಎನ್ನುವ ಒಂದು ಬ್ರ್ಯಾಂಡ್ ಕಟ್ಟಿಕೊಟ್ಟಿದ್ದಾರೆ. ಅದನ್ನು ಒಳಗೊಂಡಂತೆ ನನ್ನನ್ನು ನಾನು ಕಾಣಬೇಕು. ಅದಕ್ಕಾಗಿ ಹಳೆಯ ಸಿಲ್ಲಿಲಲ್ಲಿಯನ್ನು ಮತ್ತೇ ವೀಕ್ಷಿಸಿ ಅಭ್ಯಾಸ ಮಾಡಿದೆ. ಆರಂಭದಲ್ಲಿ ಸ್ವಲ್ಪ ಕಷ್ಟ ಅನ್ನಿಸಿತು. ಈಗ ಒಂದು ಗ್ರಿಪ್ ಸಿಕ್ಕಿದೆ ಸರಾಗವಾಗಿ ಸಾಗುತ್ತಿದೆ.

◆ **ವಿಠಲ್ ರಾವ್ ಮತ್ತು ಪ್ರಭು ರಾಜ್ ನಡುವಿನ ಮಾನಸಿಕ ಅಂತರವನ್ನು ಹೇಗೆ ಕಾದುಕೊಳ್ಳುತ್ತೀರಿ?**

'ರೇ' ಇಂಗ್ಲಿಷ್‌ನ 'IF' ಎನ್ನುವ ತಂತ್ರವನ್ನು ಬಳಸಬೇಕು. ಅಂದರೆ ನೀನು ಅದಾದರೇ... ಅಥವಾ ಇದಾದರೇ, ವಿಠಲ್‌ರಾವ್ ಆದರೆ, ಗೋವಿಂದು ಆದರೆ ಎನ್ನುವ ಸಾಧ್ಯತೆಗಳ ಲೆಕ್ಕಾಚಾರ ತುಂಬ ಅನುಕೂಲ ಆಗುತ್ತದೆ. ಪಾತ್ರದೊಳಗೆ ಪ್ರವೇಶಿಸಲು ಅದು ಸುಲಭ ಮಾರ್ಗ. ಯಾವುದೇ ಪಾತ್ರವನ್ನು ಮಾಡಬೇಕಾದರೆ ಹೋಮ್ ವರ್ಕ್ ಮಾಡುತ್ತೇನೆ. ದೇಹ ಮತ್ತು ಭಾಷೆಯನ್ನು ಅದಕ್ಕೆ ಹೊಂದಿಸುತ್ತೇನೆ. ಕೆಲವು ಕ್ಲಿಷ್ಟ ಸಂದರ್ಭದಲ್ಲಿ ಪಾತ್ರವನ್ನು ಬಿಟ್ಟು ಪಾತ್ರಧಾರಿಯೇ ವರ್ತಿಸಬೇಕಾಗುತ್ತದೆ. ಸಂದರ್ಭಾನುಸಾರ ಆ ಕೌಶಲ್ಯವನ್ನೂ ಬಳಸಬೇಕು. ಕಲಾಕೃತಿಯಲ್ಲಿ ಪಾತ್ರ ಮತ್ತು ಪಾತ್ರಧಾರಿಯ ಮಿಶ್ರಣದ ಎರಕ ಇರುತ್ತದೆ. ಆ ಎರಡರ ನಡುವೆ ಏನೋ ಇದೆ ಅದನ್ನು ಹುಡುಕಾಟ ಮಾಡಬೇಕು.

◆ **ನೀವು ಮನೆಯನ್ನು ಎದುರಿಸಿದ ಬಗೆಯನ್ನು ಪರಿಚಯಿಸಿ.**

ಮೈಸೂರು ಸಮೀಪದ ಗೊಲ್ಲನ ಬೀಡು ಸರಗೂರು (ಜಿ.ಬಿ. ಸರಗೂರು) ನಮ್ಮೂರು. ತಂದೆ ರಾಜಶೇಖರ, ತಾಯಿ ಅನಿತಾ. ಕೃಷಿ ಜೊತೆ ಹೈನುಗಾರಿಕೆ ಮಾಡುತ್ತೇವೆ. ನಮ್ಮ ತಾತ ಗ್ರಾಮೀಣ ರಂಗಭೂಮಿಯಲ್ಲಿ ಖ್ಯಾತ ಕಲಾವಿದರಂತೆ. ಪೌರಾಣಿಕ ಪಾತ್ರಗಳನ್ನು ಅವರು ಮಾಡ್ತಾ ಇದ್ದರಂತೆ. ಅವರನ್ನು ನಾನು ನೋಡಿರಲಿಲ್ಲ. ನಮ್ಮ ಚಿಕ್ಕಪ್ಪನವರಿಗೆ ರಂಗಭೂಮಿ ಬಗ್ಗೆ ಆಸಕ್ತಿ ಹೆಚ್ಚು ಒಂದೆರಡು ಸಿನಿಮಾದಲ್ಲೂ ನಟಿಸಿದ್ದಾರೆ. ಅವರ ಮೂಲಕ ರಂಗ ಪ್ರೇಮ ನನ್ನಲ್ಲಿ ಬೆಳೆಯಿತು. ಪ್ರೌಢಶಾಲೆಯಲ್ಲಿಯೇ ನನಗೆ ತೋಚಿದ್ದನ್ನೆಲ್ಲಾ ವೇದಿಕೆಯಲ್ಲಿ ಸಾದರಪಡಿಸುತ್ತಿದ್ದೆ.

ಹತ್ತನೇ ತರಗತಿ ಮುಗಿದ ನಂತರ ಅಭಿನಯ ಕಲಿಯಬೇಕು ಎಂದುಕೊಂಡಿದ್ದೆ. ಆಗ ಮನೆಯಲ್ಲಿ ಸಮಸ್ಯೆ ಶುರುವಾಯಿತು. ಓದು ಎಂದು ಒತ್ತಾಯಿಸಿ ಪಿಯುಸಿಗೆ ಸೇರಿಸಿದರು. ಬೇಡ ಬೇಡ ಅನ್ನುತ್ತಲೆ ಬಿಬಿಎಂ ಮಾಡಿದೆ. ಪದವಿ ನಂತರ ಓದುವುದಿಲ್ಲ ಎಂದು ಹೇಳಿದೆ. ಮನೆಯಲ್ಲಿ ಸ್ವಲ್ಪ ಕಷ್ಟ ಇತ್ತು. ಅದೆಲ್ಲ ನಮಗಲ್ಲ ಎನ್ನುವ ಹಿತೋಪದೇಶ. ನನ್ನ ಪಟ್ಟು ನಾನು ಬಿಡಲಿಲ್ಲ. ಆಗ ನನ್ನ ಅಕ್ಕ ಜ್ಯೋತಿ ನನ್ನ ನೆರವಿಗೆ ಬಂದರು. ಒಂದು ವರ್ಷ ಅವನಿಗೆ ಏನು ಇಷ್ಟವೋ ಅದನ್ನು ಮಾಡಲಿ ಎಂದು ನಮ್ಮ ಪೋಷಕರ ಮನವೊಲಿಸಿದಳು. ನಾನು ನಟನ ಸೇರಿದೆ. ಮತ್ತೆ ಹಿಂದಕ್ಕೆ ನೋಡಲೇ ಇಲ್ಲ. ನಟ ಆಗದಿದ್ದರೆ ಐದು ಹಸು ತಂದು ಚಂದದಿಂದ ಸಾಕುತ್ತಿದ್ದೆ. ಆದರೆ ರಂಗಭೂಮಿ ನನ್ನ ಜೀವನವನ್ನು ಬದಲಿಸಿತು.

■ **ರಾಘವೇಂದ್ರ ಕೆ.**